Indian Streams Research Journal
Vol.2,Issue.IV/May; 12pp.1-4 ISSN:-2230-7850

**Research Papers**

# ಮುಕ್ತಾಯಕ್ಕ

*ಡಾ. ಗಂಗಾಂಬಿಕಾ ಪಾಟೀಲ*
*ಕನ್ನಡ ಸಹ -ಪ್ರಾಧ್ಯಾಪಕರು*
*ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೀದರ*

ಸತ್ಯ ಪ್ರಕಾಶದ ಜ್ಯೋತಿಯನ್ನು ಹಿಡಿದು ಕಲ್ಯಾಣ ನಾಡನ್ನು ತೊಳಗಿ ಬೆಳಗಿಸಿ, ವಿಶ್ವಕ್ಕೆ ಹೊಸ ಜ್ಞಾನ ಸೂರ್ಯನು ಉದಯಿಸಿದ್ದು, ಹನ್ನೆರಡನೆಯ ಶತಮಾನ ಬಸವಣ್ಣನವರ ಆಗಮನ ಭಾರತೀಯ ಧಾರ್ಮಿಕ ಸಾಮಾಜಿಕ, ಆಧ್ಯಾತ್ಮಿಕ ಮತ್ತು ರಾಜಕೀಯ ಕ್ಷಿತಿಜದ ಮೇಲೆ ಹೊಸ ಬೆಳಕು ಮೂಡಿಸಿತು. ಆ ಬೆಳಕಿನಲ್ಲಿ ಅಸಂಖ್ಯ ಶರಣ ಶರಣೆಯರು ಬುದ್ಧಿಜೀವಿಗಳು ಕನ್ನಡ ನಾಡಿನಲ್ಲಿ ಮೂಡಿಬಂದರು.

ಬಸವಪೂರ್ವದಲ್ಲಿ ಸ್ತ್ರೀಯ ವಿಷಯವಾಗಿದ್ದ ಸಾಮಾಜಿಕ ಅನಿಷ್ಟಗಳ ವಿರುದ್ಧವಷ್ಟೆ ಶಿವಶರಣೆಯರು ಹೋರಾಡಿ ಸಮಾನತೆಯ ಆಚರಣೆಯನ್ನು ಸಮಾಜದಲ್ಲಿ ಪ್ರಸ್ತಾಪಿಸಿದರಲ್ಲದೆ, ಅಲ್ಲಿಯವರೆಗೆ ಪುರುಷ ಪ್ರಧಾನವೆಂದು ಭಾವಿಸಲಾದ ಅಧ್ಯಾತ್ಮ, ಅಧ್ಯಾತ್ಮ ತಂತ್ರಜ್ಞಾನ ಸಿದ್ಧಾಂತ ಹೀಗೆ ಮತ್ತಿತರ ಕ್ಷೇತ್ರಗಳಲ್ಲಿ ವಚನ ಸಾಹಿತ್ಯದ ಮೂಲಕ ಅಮೂಲ್ಯವಾದ ಕೊಡುಗೆ ಕೊಟ್ಟಿದ್ದಾರೆ. ಆ ಸಾಲಿನಲ್ಲಿ ಅಗ್ರಗಣ್ಯಳಾಗಿ ಎದ್ದು ಕಾಣುವಂಥ ವ್ಯಕ್ತಿತ್ವ ಮುಕ್ತಾಯಕ್ಕನದು.

"ಅಜಗಣ್ಣ ತಂದೆ" ವಚನಾಂಕಿತವನ್ನಿಟ್ಟುಕೊಂಡು ವಚನ ಬರೆದ ಮುಕ್ತಾಯಕ್ಕ ಶರಣೆಯರಲ್ಲಿಯೆ ವಿಶಿಷ್ಟ ಮನೋಧರ್ಮದವಳು. ತರ್ಕವಾದ-ವಿವಾದಗಳಿಂದ ಸತ್ಯವನ್ನು ತನ್ನ ತೀಕ್ಷ್ಣಮತಿಯಿಂದ ಒರೆಗಲ್ಲಿಗೆ ತಿಕ್ಕಿ ನೋಡುವ ವ್ಯಕ್ತಿತ್ವ ಅವಳದು. ಶರಣ ಧರ್ಮದ ಕೈಪಿಡಿಗಳೆಂದು, ಸಾಹಿತ್ಯರಚನೆಯಲ್ಲಿಯ ಅದ್ಭುತಗಳೆಂದು ಖ್ಯಾತಿ ಪಡೆದ ನಾಲ್ಕು ಶೂನ್ಯ ಸಂಪಾದನೆಗಳಲ್ಲಿ ಅಲ್ಲಮಪ್ರಭುವಿನ ಜೊತೆಗೆ ಸಂವಾದಕ್ಕಾಗಿ ಪ್ರಥಮೋಪದೇಶದಲ್ಲಿ ಮುಕ್ತಾಯಕ್ಕನನ್ನು ನಿರೂಪಿಸಿದ್ದು ಅವಳ ಆಧ್ಯಾತ್ಮಿಕ ಆಯಾಮದ ಆಳವನ್ನು ಎತ್ತಿ ತೋರಿಸುತ್ತದೆ. ಅವಳು ರಚಿಸಿದ ೩೭ ವಚನಗಳು ಉಪಲಬ್ಧವಿದ್ದು ಅವುಗಳ ವಿವಿಧ ಆಯಾಮಗಳ ಅಧ್ಯಯನದಿಂದ ಹೊರಟ ನಿಷ್ಕರ್ಷದಿಂದ ಮುಕ್ತಾಯಕ್ಕ ಕೇವಲ ವಚನಕಾರ್ತಿ ಮಾತ್ರವಾಗಿರದೆ, ಪ್ರಖರಯೋಗಿನಿ ಮತ್ತು ಶ್ರೇಷ್ಠ ಅನುಭಾವಿಯಾಗಿದ್ದು, ಬಸವ ಸಮಕಾಲಿನ ಶರಣರ ಸಾಲಿನಲ್ಲಿ ಘನ ಸ್ಥಾನವನ್ನು ಪಡೆದಿದ್ದಾಳೆ.

ಇವಳ ಆಧ್ಯಾತ್ಮಿಕ ಜೀವನದಷ್ಟೆ ವೈಯಕ್ತಿಕ ಜೀವನವೂ ವಿಲಕ್ಷಣವಾಗಿದೆ. ಅವಳ ಜೀವನದ ನಿಗೂಢತೆ ಹುಟ್ಟಿನಿಂದಲೆ ಆರಂಭವಾಗುತ್ತದೆ. ಅವಳು ಹುಟ್ಟಿ ಬೆಳೆದದ್ದು ಅಜಗಣ್ಣನ ಜೊತೆಗೆಂದು ಪ್ರಸಿದ್ಧವಾಗಿದ್ದರೂ, ಅವಳೆ ಹೇಳುವ ಪ್ರಕಾರ

> "ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯ
> ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು
> ನಿರ್ಬುದ್ಧಿಯಾದವಳನೇನೆಂಬೆನಣ್ಣಾ?.....

ಇದು ತರ್ಕದ ಆಧಾರದ ಮೇಲೆ ವಿಶ್ಲೇಷಿಸಿದರೆ ಅವಳ ಚರಿತ್ರೆಗೆ ಪ್ರಚಲಿತವಿದ್ದ ಜನಮಾನಸದಲ್ಲಿಯ ಊಹೆಗಳಿಗಿಂತ ಭಿನ್ನವಾದ ನೆಲೆಯು ಕಾಣಿಸಿಕೊಳ್ಳುತ್ತದೆ. ಅವಳ ಹುಟ್ಟು ನಿಗೂಢವಾಗಿದ್ದರೂ ಬೆಳೆದದ್ದು ಮಾತ್ರ ಒಬ್ಬ ಹಿಂದುಳಿದ ಸಮಾಜದಲ್ಲಿ ಹುಟ್ಟಿದ ಮುಗ್ಧ ಶರಣನ ಜೊತೆ. ಅವನ ಊರು ಗದಗ ಜಿಲ್ಲೆಯ ಲಕ್ಕುಂಡಿ ಅವನ ಹೆಸರು ಅಜಗಣ್ಣ.

ಅಜಗಣ್ಣ- ಮುಕ್ತಾಯಕ್ಕರು ದನ ಮತ್ತು ಕುರಿ ಕಾಯುವ ಕಾಯಕ ಕೈಗೊಂಡಿದ್ದರೆಂದು ತಿಳಿದು ಬರುತ್ತದೆ. ಅದೇನಿದ್ದರೂ ಮುಕ್ತಾಯಕ್ಕನನ್ನು ಅಜಗಣ್ಣನು ಪ್ರೀತಿಯಿಂದ ಬೆಳೆಸುತ್ತಾನೆ. ಪ್ರಾಪ್ತ ವಯಸ್ಸಿಗೆ ಬಂದ ತನ್ನ ತಂಗಿಯನ್ನು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮಸರಕಲ್ಲಿನಲ್ಲಿ ಒಬ್ಬ ಶರಣನ ಜೊತೆ ಮದುವೆ ಮಾಡಿಕೊಡುತ್ತಾನೆ. ಈ ವಿವಾಹದ ನಂತರ ಮುಕ್ತಾಯಕ್ಕ ತನ್ನ ಪತಿಯೊಡನೆ ಮಸರಕಲ್ಲಿಗೆ ಹೋಗುತ್ತಾಳೆ. ಮುಕ್ತಾಯಕ್ಕ ಹಾಗೂ ಅಜಗಣ್ಣರ ಸಂಬಂಧ ಸಾಮಾನ್ಯ ಅಣ್ಣ ತಂಗಿಯರಂತಿರಲಿಲ್ಲಾ "ತನ್ನಲ್ಲಿ ತಾನು ಸನ್ನಿಹಿತನಾದೇನೆಂದರೆ ಗುರುವಿಲ್ಲದೆ ಆಗದು ಕೇಳಾ, ಎನ್ನ ಅಜಗಣ್ಣನಿಂದ ಗುರುವಿಲ್ಲದೆ ಆರೂಢಿಯ ಕೂಟ

ಸಮನಿಸದು ಕೇಳಾ" ಅಜಗಣ್ಣ ಅವಳಿಗೆ ಪ್ರೀತಿಯ ಪೋಷಕನೂ ಜ್ಞಾನದ ಗುರುವೂ ಆಗಿದ್ದ. ಇದರಿಂದಾಗಿ ಮುಕ್ತಾಯಕ್ಕ ಅಣ್ಣನನ್ನು ಬಿಟ್ಟುಗಂಡನೂರಿಗೆ ಹೋಗುವಾಗ ಅತೀವ ವೇದನೆ ಅನುಭವಿಸುತ್ತಾಳೆ. ಅವಳ ದು:ಖವನ್ನು ಕಂಡು ಅಜಗಣ್ಣ "ಹುಚ್ಚಿ ನೀನೇನು ಪರದೇಶಕ್ಕೆ ಪ್ರಯಾಣ ಬೆಳೆಸುತ್ತಿರುವೆಯಾ" ಲಕ್ಕುಂಡಿಗೆ ಮಸಳಿಕಲ್ಲು ಬಹುದೂರವೇ? ನೀನು ಕರೆದಾಗ ಬರುವೆ. ದುಮ್ಮಾನವನ್ನು ಬಿಟ್ಟು ಸುಮ್ಮಾನದಿಂದ ಪತಿಯ ಮನೆಗೆ ಹೋಗಮ್ಮ ಎಂದು ಸಾಂತ್ವನ ಹೇಳುತ್ತಾನೆ. ಆಗ ಹೋಗಿ ಬರುವೆನಣ್ಣಾ ಹೋಗಿ ಬರುವೆ. ಹೊರಡುವ ಮುನ್ನ ಒಂದು ಕುರುಹು ಕೊಡು ಎಂದು ಕೇಳುತ್ತಾಳೆ. ಅದೇತರ ಕುರುಹು ಎಂದಾಗ ನಿನಗೇನಾದರೂ ಆದರೆ ನನಗೆ ತಿಳಿಯುವ ಕುರುಹು ಎಂದಾಗ,

ನಾರಿ ನೀನುಟ್ಟ ಸೀರೆಯ ನಿರಿಯು ಕಳದಪುದು
ತೋರ ಮುಡಿಗಟ್ಟು ಬಿಚ್ಚುವುದು ಕಡೆವುತ್ತಿರ್ಪ
ಮೊಸರು ತಾಂ ಕಲ್ಲಪ್ಪುದು"

ಎಂದು ಶಿವಸಂಧಾನ ಸೂಚನೆಯ ತಂಗಿಗಾನಂದದಿಂದುಸುರಿ ಕಳುಹಲು, ಗಂಡನಾಲಯಕ್ಕೆ" ಬಂದಳು. ಅಜಗಣ್ಣ ಇಲ್ಲಿಂದ ಕಲ್ಯಾಣಕ್ಕೆ ಹೊರಡುತ್ತಾನೆ. ಕಲ್ಯಾಣದ ಅನುಭವ ಮಂಟಪದಲ್ಲಿ ಅಜಗಣ್ಣ ತನ್ನ ಸ್ವಭಾವ, ಸಾಧನೆ, ಅನುಭಾವ, ಗಾಂಭೀರ್ಯಗಳಿಂದ ಶರಣಗಣದ ಗೌರವಾದರಗಳಿಗೆ ಪಾತ್ರನಾಗಿದ್ದನೆಂಬುದು ಹಲವು ಶರಣರು ತಮ್ಮ ವಚನಗಳಲ್ಲಿ ಅವನ ಬಗ್ಗೆ ಹೇಳಿದ ಗೌರವಪೂರ್ಣವಾದ ನುಡಿಗಳಿಂದ ವ್ಯಕ್ತವಾಗುತ್ತದೆ.

ಐಕ್ಯನಾದರೆ ನಮ್ಮ ಅಜಗಣ್ಣನಂತಾಗಬೇಕು ಎಂದು ದುಗ್ಗಳೆ, ನಾನು ನಿಮ್ಮವಳಲ್ಲವಯ್ಯಾ ನಾನು ಅಜಗಣ್ಣನವಳು ಎಂದು ನಿಲಾಂಬಿಕಾ ತಾಯಿ, ಅಜಗಣ್ಣನ ಐಕ್ಯಸ್ಥಲ ಎನಗಾಯಿತ್ತು ಎಂದು ಅಕ್ಕಮಹಾದೇವಿ ಹೀಗೆ ಅಜಗಣ್ಣ ಕಲ್ಯಾಣದಲ್ಲಿರುವಾಗಲೆ ಷಟಸ್ಥಲದ ಸಾಧನೆಯ ಸಿದ್ಧಿಯಿಂದ ಐಕ್ಯಸ್ಥಲಕ್ಕೇರಿದವನೆಂದು ತಿಳಿದು ಬರುತ್ತದೆ.

ಅನುಭವ ಮಂಟಪದ ಅನುಭಾವಿಗಳ ರಸವಾರಿಧಿಯ ಅಚ್ಚವೌಕ್ತಿಕವಾಗಿದ್ದ ಅಜಗಣ್ಣ ಶರಣರ ಸಂಗಸುಖದಲ್ಲಿರುವಾಗ, ತನ್ನ ಮಾರ್ಗದರ್ಶನದಲ್ಲಿ ಅನುಭಾವದ ಒಂದೊಂದೆ ಹೆಜ್ಜೆಯನ್ನಿಡುತ್ತಾ ಮುಂದುವರಿದಿದ್ದಾಗ ಮುಕ್ತಾಯಕ್ಕನ ನೆನಹಿನಿಂದಾಗಿಯೋ ಅಥವಾ ಕಲ್ಯಾಣಕ್ಕೆ ಬರುವ ಶರಣರಿಂದ ಅಜಗಣ್ಣನನ್ನು ಕಾಣುವ ಅದಮ್ಯ ಹಂಬಲದ ಮುಕ್ತಾಯಕ್ಕನ ನಿರೂಪ ಬಂದುದಕ್ಕಾಗಿಯೋ ಅಜಗಣ್ಣ ಮುಕ್ತಾಯಕ್ಕನನ್ನು ಕಾಣಲು ಮೊಸರಕಲ್ಲಿಗೆ ತೆರಳುತ್ತಾನೆ.

ಮಸರಕಲ್ಲಿಗೆ ಬಂದ ಅಜಗಣ್ಣ ತಂಗಿ ಮುಕ್ತಾಯಕ್ಕನಿಗೂ ಪಂಚಾಚಾರ, ಅಷ್ಟಾವರಣ, ಷಟ್‌ಸ್ಥಲಾಧಾರಿತ ಶಿವಯೋಗದ ಜ್ಞಾನವನ್ನು ಮಾಡಿಕೊಡುತ್ತಾನೆ. ಈಗಾಗಲೆ ಅನುಭಾವ ಸರೋವರದ ಅರಸಂಚೆಯಾಗಿ ತೇಲುತ್ತಿದ್ದ ಅಜಗಣ್ಣ ಮುಕ್ತಾಯಕ್ಕನೊಂದಿಗೆ ಮಸರಕಲ್ಲಿನ ಸಮೀಪವಿರುವ ಉಮಾಪುರದಲ್ಲಿ ವಾಸಿಸುತ್ತಾನೆ. ಅಜಗಣ್ಣನಿಂದ ಇಷ್ಟಲಿಂಗ ದೀಕ್ಷೆ ಪಡೆದ ಮುಕ್ತಾಯಿ ಶಿವಯೋಗ ಸಾಧನೆಯಲ್ಲಿ ನಿರತಳಾಗಿ ತನ್ನ ಗಂಡನೊಂದಿಗೆ ಮಸರಕಲ್ಲಿನಲ್ಲಿಯೇ ಉಳಿದಂತೆ ತೋರುತ್ತದೆ.

ಕೆಲವು ದಿನಗಳ ನಂತರ ಉಮಾಪುರ ಗ್ರಾಮದಲ್ಲಿಯೇ ಅಜಗಣ್ಣನು ಬಯಲಿನಲ್ಲಿ ಬಯಲಾಗುತ್ತಾನೆ. ಈ ಸುದ್ದಿ ಮುಕ್ತಾಯಕ್ಕನಿಗೆ ತಿಳಿದುದರ ಬಗೆಗೂ ಒಂದು ಆಖ್ಯಾಯಿಕೆ ಇದೆ. ಅಜಗಣ್ಣ ಲಿಂಗೈಕ್ಯವಾದ ದಿನ ಮುಕ್ತಾಯಕ್ಕ "ಮೊಸರು ಕಡೆಯುವಾಗ ಆ ಮೊಸರು ಕಲ್ಲಿನಂತಾಯಿತ್ತು. ಉಟ್ಟ ಸೀರೆಯ ನಿರಿಗೆ ಸಡಿಲಿತು. ತೋರಮುಡಿಗಟ್ಟು ಬಿಚ್ಚಿತು". ಈ ಸಂಕೇತಗಳನ್ನರಿತ ಮುಕ್ತಾಯಕ್ಕ ದುಃಖದೊಳು ಉಮಾಪುರಕ್ಕೆ ಧಾವಿಸುತ್ತಾಳೆ. ಅಣ್ಣನಿಂದ ದೀಕ್ಷೆಯನ್ನು ಪಡೆದು ಶರಣ ತತ್ತ್ವದಲ್ಲಿ ಶುದ್ಧ ಜೀವನವನ್ನು ಸಾಗಿಸುತ್ತ, ಶಿವಯೋಗ ಸಾಧಕಳಾದ ಮುಕ್ತಾಯಿಗೆ ಅಜಗಣ್ಣನ ಮೃತ್ಯುವಿನ ಸುದ್ದಿ ಆಘಾತವನ್ನುಂಟು ಮಾಡುತ್ತದೆ. ದಟ್ಟಾರಣ್ಯದಲ್ಲಿ ಸಿಲುಕಿ ದಾರಿ ತಪ್ಪಿದ ಹಸುಳೆಯಂತಾಗುತ್ತಾಳೆ. ಈ ದುಃಖ ಭಾರದಿಂದ ಕುಗ್ಗಿದ ಅವಳು ತನ್ನ ಮುಂದಿನ ಸಾಧನೆಯನ್ನೆ ಮರೆತು ಮಾನವ ಸಹಜ ಸ್ವಭಾವಕ್ಕೊಳಗಾಗಿ ದುಃಖಿಸುತ್ತಾ ಸಾಧನೆಯಿಂದ ವಿಮುಖಳಾಗಿ ಮಸರಕಲ್ಲಿನಲ್ಲಿ ಕಾಲ ಕಳೆಯುತ್ತಿದ್ದಳು.

ಆಗ ಅಲ್ಲಮಪ್ರಭುಗಳು ಕಲ್ಯಾಣದಿಂದ ಶ್ರೀಶೈಲಕ್ಕೆ ಹೋಗುವಾಗ ದಾರಿಯಲ್ಲಿಯ ಹಲವು ಸ್ಥಳಗಳಲ್ಲಿ ಕೆಲಕಾಲ ತಂಗಿರುವ ಸಂಭವವಿದೆ. ರಾಯಚೂರು ಜಿಲ್ಲೆಯ ಕೃಷ್ಣಾನದಿಯ ದಂಡೆಯ ಮೇಲಿರುವ ಗೂಗಲ್ಲಿನಲ್ಲಿ ಅವರು ವಾಸ್ತವ್ಯ ಮಾಡಿದ್ದರೆಂದು ಹೇಳಲು ಪುರಾವೆಗಳು ದೊರೆತಿವೆ. ಈ ಗೂಗಲ್ ಉಮಾಪುರದಿಂದ ಸುಮಾರು ೧೦-೧೫ ಕಿ.ಮಿ., ಮಸರಕಲ್ಲಿನಿಂದ ೨೫-೩೦ ಕಿ.ಮೀ ಅಂತರದಲ್ಲಿದೆ. ಅಲ್ಲಿ ಇಂದಿಗೂ ಪ್ರಭುದೇವರನ್ನು ಪ್ರಭುಸ್ವಾಮಿ ಎಂಬ ಹೆಸರಿನಿಂದ ಪೂಜಿಸಲಾಗುತ್ತಿದ್ದು. ಪ್ರಭುದೇವರು ಅಲ್ಲಿ ಕೆಲಕಾಲ ಉಳಿದು ತಪಗೈದ ೪೦-೬೦ ಅಡಿ ವಿಶಾಲವಾದ ಕಲ್ಲಿನ ಗವಿಯು ಇದೆ. ಗೂಗಲ್ಲಿನ ವಾಸ್ತವ್ಯದಲ್ಲಿ ಅಲ್ಲಮಪ್ರಭುಗಳು ಅಜಗಣ್ಣನ ಲಿಂಗೈಕ್ಯದ ಸುದ್ದಿ ತಿಳಿದು ದುಃಖದಲ್ಲಿದ್ದ ಮುಕ್ತಾಯಕ್ಕನಿಗೆ ಸಾಂತ್ವನ ನೀಡಲು ಮಸರಕಲ್ಲಿಗೆ ಹೋಗುತ್ತಾರೆ.

ಮುಕ್ತಾಯಕ್ಕನನ್ನು ಅಲ್ಲಮಪ್ರಭುಗಳು ಭೇಟಿಯಾದ ಬಗ್ಗೆ ಜನಮಾನಸದಲ್ಲಿ ಬಹುನಾಟಕೀಯವಾದ ಚಿತ್ರಣ ಪ್ರಚಲಿತವಿದೆ. ಅಜಗಣ್ಣನ ಮೃತ್ಯುವಿನ ನಂತರ ಮುಕ್ತಾಯಕ್ಕ ಆತನ ಜಡಶರೀರದ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಪ್ರಲಾಪಿಸುತ್ತಿದ್ದಾಗ ಅಲ್ಲಮಪ್ರಭು ಅವಳಿಗೆ ಸಂದರ್ಶಿಸಿದರೆಂದು ಹಲವಾರು ಲೇಖಕರು ವರ್ಣಿಸಿದ್ದಾರೆ.

ಪ್ರಭುಗಳ ಸಾಧನ ಶಕ್ತಿ ಆಧ್ಯಾತ್ಮಿಕ ಉನ್ನತಿ ವ್ಯಕ್ತಿ ಮಹತ್ತತೆಯ ದಿವ್ಯತೇಜ ದೂರದೂರದೆಡೆಗೆ ಹರಡಿ ಜ್ಞಾನವಲಯವನ್ನೇ ನಿರ್ಮಿಸಿತು. ಇಂಥ ವಲಯ ಹೊಂದಿದ ಶರಣರ ದರುಶನದಿಂದ ಸಹಜವಾಗಿಯೇ ಮುಕ್ತಾಯಕ್ಕನಲ್ಲಿ ಉಂಟಾಗಿದ್ದ ಅಜ್ಞಾನದ ಅಭ್ರಚ್ಛಾಯೆ ದೂರವಾಯಿತಲ್ಲದೆ, ಈಗಾಗಲೆ ಸಾಧನಾ ಪಥದಲ್ಲಿದ್ದ ಮುಕ್ತಾಯಕ್ಕನಿಗೆ ಪ್ರಭುಗಳ ದಿವ್ಯವಾಣಿಯಿಂದ ಅರಿವು ಕಣ್ದೆರೆದು, ಮರಹು ನಷ್ಟವಾಯಿತು.

ಅಣ್ಣನಗಲಿಕೆಯ ನಂತರ ಮುಕ್ತಾಯಕ್ಕ ಕಲ್ಯಾಣದ ಶರಣರ ಒಡನಾಟದಲ್ಲಿ ಇದ್ದಳೆನಿಸುತ್ತದೆ. ಅನುಭವ ಮಂಟಪದ ಪ್ರಮುಖ ಶರಣರು ತನ್ನ ಅಧ್ಯಾತ್ಮ ಬದುಕಿನ ಮೇಲೆ ಬೀರಿದ ಪರಿಣಾಮವನ್ನು ತನ್ನ ವಚನದಲ್ಲಿ ಕೃತಜ್ಞತೆಯಿಂದ ನೆನೆಯುತ್ತಾಳೆ.

ಎನ್ನ ಭಾವಕ್ಕೆ ಗುರುವಾದನಯ್ಯಾ ಬಸವಣ್ಣನು
ಎನ್ನ ನೋಟಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು
ಎನ್ನ ಪರಿಣಾಮಕ್ಕೆ ಪ್ರಸಾದವಾದನಯ್ಯಾ ಮರುಳ ಶಂಕರದೇವರು
ಎನ್ನ ಹೃದಯಕ್ಕೆ ಮಂತ್ರವಾದನಯ್ಯ ಮಡಿವಾಳಯ್ಯನು
ಇಂತಿ ಐವರ ಕಾರುಣ್ಯ ಪ್ರಸಾದವಕೊಂಡು
ಬದುಕಿದೆನಯ್ಯಾ ಅಜಗಣ್ಣ ತಂದೆ"

ಎನ್ನುತ್ತಾಳೆ.

ಸುಮ್ಮನೇಕೆ ದಿನಕಳೆವಿರಿ, ಸುಮ್ಮನೇಕೆ ಹೊತ್ತುಗಳೆವಿರಿ?
"ಸುಮ್ಮನೇಕೆ ಹೊತ್ತುಗಳೆವಿರಿ ಸ್ವಾಮಿಗಳಿರಾ?
ಮಾಡಬನ್ನಿ ದಿನ ಶಿವರಾತ್ರಿಯ ಕೇಳಬನ್ನಿ ಶಿವಾನುಭವವ
ನೋಡಬನ್ನಿ ಅಜಗಣ್ಣನಿರವ ಬಸವಣ್ಣ ತಂದೆ"

ಎಂದು ಕೂಗಿ ಕರೆಯುವ ವಚನವೊಂದು ಅವಳು ಪ್ರತಿದಿನ ಅನುಭಾವ ಚಿಂತನ ನಡೆಯುತ್ತಿದ್ದ ಅನುಭವ ಮಂಟಪಕ್ಕೆ ಹೋದಾಗ ಅವಳಿಂದ ಹೊರಟ ಆನಂದದ ಉದ್ಗಾರವೆ ಆಗಿದೆ.

ನಂತರ ಮುಕ್ತಾಯಕ್ಕ ತನ್ನ ಕೊನೆಯ ಜೀವನ ಶ್ರೀಶೈಲದ ಪರಿಸರದಲ್ಲಿ ಕಳೆದಳೆಂದು ಹೇಳಲು ಕಾರಣ, ಕಲ್ಯಾಣ ಕ್ರಾಂತಿಯ ನಂತರ ಕಲ್ಯಾಣದಿಂದ ಹೊರಟ ಶರಣರು ಪ್ರಮುಖವಾಗಿ ಎರಡು ಸ್ಥಾನಗಳಿಗೆ ಹೋದದ್ದನ್ನು ಕಾಣಬಹುದು. ಒಂದು ತಂಡ ಕಾರವಾರ ಜಿಲ್ಲೆಯ ಉಳಿವೆಯ ಕಾಡಿನತ್ತ ಹೋಗಿದ್ದರೆ, ಇನ್ನೊಂದು ತಂಡ ಶ್ರೀಶೈಲ ಕದಳಿಯ ವನದೆಡೆಗೆ ತೆರಳಿತು.

ಉಳವಿಯೆಡೆಗೆ ಹೋದ ಶರಣರು ಪ್ರಮುಖವಾಗಿ ವಚನಸಾಹಿತ್ಯದ ರಕ್ಷಣೆ ಬಸವ ಧರ್ಮದ ಪ್ರಸಾರ ಜೊತೆಗೆ ಅಧ್ಯಾತ್ಮಿಕ ಸಾಧನೆಗಾಗಿ ಹೋದರೆ, ಶ್ರೀಶೈಲದೆಡೆಗೆ ಹೋದ ಶರಣರು ಮುಖ್ಯವಾಗಿ ಶಿವಯೋಗ ಸಾಧನೆ ಅಥವಾ ಲಿಂಗಾಂಗ ಸಾಮರಸ್ಯದ ಹಿನ್ನಲೆಯಲ್ಲಿ ಯೋಗಸಾಧನೆಯನ್ನು ಸಾಧಿಸಿಕೊಳ್ಳುವ ಹಂಬಲದ ಪೂರ್ತಿ ನಿರ್ವಯಲ ಸಮಾಧಿ ಹೊಂದಿ ಅಧ್ಯಾತ್ಮಿಕ ಅತ್ಯುನ್ನತ ಪಾತಳಿಯನ್ನು ಮುಟ್ಟಲು ಹೋದರೆನಿಸುತ್ತದೆ. ಈ ಸನ್ನಿವೇಶದಲ್ಲಿ ಮುಕ್ತಾಯಕ್ಕನ ಜೀವನ ಅವಳ ಸಾಧನೆ ಮತ್ತು ಅನುಭಾವದ ವಚನಗಳನ್ನು ಗಮನಿಸಿದಾಗ ಅವಳಿಗೂ ಮತ್ತು ಪ್ರಭುದೇವರ ತಂಡದಲ್ಲಿದ್ದ ಶರಣರಿಗೂ ಬಹಳ ಸಾಮ್ಯವಿರುವುದು ಕಂಡುಬರುತ್ತದೆ. ಮಹಾದೇವಿ ಅಕ್ಕನಿಗೂ ಮುಕ್ತಾಯಕ್ಕನಿಗೂ ಪ್ರಭುದೇವರಿಂದಲೇ ಮಾರ್ಗದರ್ಶನವಾಗಿತ್ತೆನ್ನುವುದು ಕೂಡಾ ಮರೆಯಲಾಗದು. ಮುಕ್ತಾಯಕ್ಕನ ವಚನಗಳು ವಿಸ್ಮಯಕಾರಕವಾದ ವಾಙ್ಮಯದ ವಿಪುಲತೆ ಮತ್ತು ಆಧ್ಯಾತ್ಮಿಕತೆಯಿಂದ ಮೌಲ್ಯಭರಿತವಾಗಿವೆ. ಇದರ ಜೊತೆಗೆ ಸಾಧನಾ ಪಥದಲ್ಲಿಯ ಮಹಾಮೇರುವನ್ನು ತಲುಪಿದ ಯೋಗಿಯ ಅನುಭಾವದ ಆವೇಶದ ಪರಾಕಾಷ್ಠೆಯನ್ನು ಕೂಡಾ ಪ್ರಕಟಿಸುತ್ತವೆ.

ಅಧ್ಯಾತ್ಮ ಮತ್ತು ತತ್ವಶಾಸ್ತ್ರ ಪರಿಮಾಣಗಳ ಹಿನ್ನೆಲೆಯಲ್ಲಿ ಈ ವಚನಗಳನ್ನು ಅವಲೋಕಿಸಿದಾಗ ಅತೀಂದ್ರಿಯ ಅನುಭವ, ನೈತಿಕತೆ, ಅಧ್ಯಾತ್ಮಿಕತೆಗಾಗಿ ಪ್ರಲೋಭನೆಗಳು, ವಾಸ್ತವವಾಗಿ ಮತ್ತು ವಸ್ತುನಿಷ್ಠತೆ, ಮಾನಸಿಕ ಸ್ಪಂದನೆ, ಫಲವಾದ, ದಿವ್ಯಾನುಭೂತಿ ಸತ್ಯದೊಂದಿಗೆ ಸಂಯೋಗಾತ್ಮಕತೆ ಮುಂತಾದ ಚಿರಂತನ ಅಧ್ಯಾತ್ಮಿಕ ಮೌಲ್ಯಗಳು ನಿಶ್ಯಬ್ದ, ಗುರು, ಲಿಂಗಾಂಗ ಸಾಮರಸ್ಯ ಮುಂತಾದ ತತ್ತ್ವಗಳು ಮತ್ತು ಕಾವ್ಯ ಸೌಂದರ್ಯಗಳು ಕಂಡುಬರುತ್ತವೆ.

ಮುಕ್ತಾಯಕ್ಕನ ವಚನಗಳಿಂದ ಹೊರಹೊಮ್ಮುವ ಮೌಲ್ಯಗಳು ಸ್ಪಷ್ಟವಾಗಿದ್ದು, ಅವಳ ವಿಚಾರ ಮತ್ತು ಜ್ಞಾನಶಕ್ತಿಯ ತೀಕ್ಷ್ಣತೆ ತೋರುತ್ತವೆ. 'ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು' ಇದು ಅತೀಂದ್ರಿಯ ಅನುಭವ ತೋರಿದರೆ, 'ನುಡಿಯಲುಬಾರದು. ಕೆಟ್ಟನುಡಿಗಳ' ಇದು ನೈತಿಕತೆಯನ್ನು; ಕಾಯದೊಳಗೆ ಮಾಯವಿಲ್ಲ ಭಾವದೊಳಗೆ ಭ್ರಮೆಯಿಲ್ಲ 'ಇದು ಅಧ್ಯಾತ್ಮಿಕ ಪ್ರಲೋಭನೆಯನ್ನು, ತೊರೆಯ ಕಟ್ಟೆಯ ನಿಲಿಸಲು ಬಹುದೆ? ಇದು ವಾಸ್ತವವಾದ ಮತ್ತು ವಸ್ತುನಿಷ್ಠತೆಯನ್ನು, 'ಕ್ರೋಧವೆಂಬ ಹೊಲಗೇರಿಯ ಹೊರವಂಟು ಇಲ್ಲಿ ಮಾನಸಿಕ ಸ್ಪಂದನೆಯನ್ನು; ಶಿವಶರಣರ ದರುಶನದ ಸುಖವನೇನೆಂದೆನಬಹುದು ಇದು

Indian Streams Research Journal
Vol.2,Issue.IV/May; 12pp.1-4 ISSN:-2230-7850

ಫಲವಾದವನ್ನು; ಮನದ ಕೊನೆಯ ಮೊನೆಯ ಮೇಲಣ ಅರಿವಿನ ಕಣ್ಣಮುಂದೆ ಸ್ವಯಂಪ್ರಕಾಶ ತೋರುತ್ತಿದ್ದಡೆ ದಿವ್ಯಾನುಭೂತಿಯನ್ನು 'ಘನಕ್ಕೆ ಘನವೇದ್ಯವಾದ ಬಳಿಕ ಅರಿಯಲಿಲ್ಲ ಮರೆಯಲಿಲ್ಲ' ಇದು ಸತ್ಯದೊಂದಿಗಿನ ಸಂಯೋಗಾತ್ಮಕತೆಯನ್ನು ತೋರಿಸುತ್ತದೆ.

ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು ಶಿಶುಕಂಡ ಕನಸಿನಂತಿರಬೇಕಲ್ಲದೆ ಇದರಲ್ಲಿ ನಿಶ್ಯಬ್ದ ತತ್ವವನ್ನು, 'ಗುರುವಚನದಿಂದಲ್ಲದೆ ಲಿಂಗವನರಿಯಬಾರದು. ಇದರಲ್ಲಿ ಗುರುತತ್ವವನ್ನು; ಶಬ್ದಮುಗ್ದವಾಗಿ ಎನ್ನ ಅಜಗಣ್ಣ ತಂದೆಯ ಬೆರೆಸಿದ ಬಳಿಕ ಉರಿಯುಂಡ ಕರ್ಪೂರದಂತಾದೆನಯ್ಯಾ ಇಲ್ಲಿ ಲಿಂಗಾಂಗ ಸಾಮರಸ್ಯದ ಬಗೆಯನ್ನು ತಿಳಿಸುತ್ತಾಳೆ.

ಹೀಗೆ ಒಬ್ಬ ಕಷ್ಟಜೀವಿಯ ಸತಿಯಾಗಿ, ಕುರಿ-ದನಗಾಹಿಯ ವೃತ್ತಿಯನ್ನು ನಿರ್ವಹಿಸುತ್ತಾ ಜೀವನದ ಕಷ್ಟ ನಷ್ಟಗಳನ್ನು ಸಹಜವಾಗಿ ಎದುರಿಸುತ್ತಾ ರಚಿಸಿದ ಅವಳ ವಚನಗಳು ವ್ಯಕ್ತಿಗಾದ ಪರಮಾತ್ಮನ ಸಾಕ್ಷಾತ್ಕಾರದ ಜೀವನ ಮುಕ್ತಾವಸ್ಥೆ ಎಲ್ಲೆಡೆಯಲ್ಲೂದೇವದರ್ಶನ ಮತ್ತು ಪರಮಾತ್ಮನ ಜೊತೆಗಿನ ಸಾಮರಸ್ಯದ ಉನ್ಮತ್ತಾವಸ್ಥೆ ಪ್ರತಿಬಿಂಬಿಸಿ, ಅವಳನ್ನು ಈ ದೇಶದ ಶ್ರೇಷ್ಠ ಅನುಭಾವಿಗಳಾದ ಅಕ್ಕಮಹಾದೇವಿ, ಮೀರಾಬಾಯಿ, ಆಂಡಾಳ ಲಲ್ಲೇಶ್ವರಿ ಮೊದಲಾದ ಆಧ್ಯಾತ್ಮ ಸಾಧಕಿಯರ ಸಾಲಿನಲ್ಲಿ ಎತ್ತಿ ನಿಲ್ಲಿಸುತ್ತವೆ.

**ಆಕರ ಗ್ರಂಥಗಳು**

೧) ಮಹಾಮನೆ ಸಂ – ೨೮
೨) ಬಸವಪಥ ಸಂ -೪೩
೩) ವಚನ ಸಂಜೀವಿನಿ - ಡಾ. ಬಸವಲಿಂಗ ಪಟ್ಟದ್ದೇವರು
೪) ಕಾಯಕ ದಾಸೋಹ – ಡಾ. ಬಸವರಾಜ ಸಬರದ
೫) ಸಂಕ್ಷಿಪ್ತ ಕನ್ನಡ ನಿಘಂಟು – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು